2. ಈ ಯೋಜನೆಯು ಇನ್ನು ಪ್ರಾರಂಭಿಕ ಹಂತದಲ್ಲಿರುವುದರಿಂದ ಶಾಲೆಯಿಂದ ಹೊರಗುಳಿದ ಮಕ್ಕಳ ಸೇರ್ಪಡೆ ಸಂಖ್ಯೆ ಹೆಚ್ಚಾಗಿರುವ ಬಗ್ಗೆ ಖಚಿತ ಪಡಿಸಲು ಸಾಧ್ಯವಾಗುತ್ತಿಲ್ಲ.

ಹಾಸನ ನಗರದ ಸತ್ಯಮಂಗಲ ಗ್ರಾಮದ ಆಶ್ರಯ ಯೋಜನೆ ಭೂಮಿಯ ಅತಿಕ್ರಮಣ

477 (433) ಶ್ರೀ ಹನುಮೇಗೌಡ ಕೆ.ಹೆಚ್. (ಹಾಸನ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಹಾಸನ ನಗರದ ಸತ್ಯಮಂಗಲ ಗ್ರಾಮದ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗೃಹನಿರ್ಮಾಣ ಮಂಡಳಿಗೆ ಸೇರಿಕೊಂಡಂತೆ ಆಶ್ರಯ ಯೋಜನೆಗೆ ಕಾಯ್ದಿರಿಸಿದ ಭೂಮಿಯಲ್ಲಿ ಮತ್ತು ಹೌಸಿಂಗ್ ಬೋರ್ಡ್‌ಗೆ ಸೇರಿದ ಜಾಗದಲ್ಲಿ ಸುಮಾರು 40 ಕ್ಕೂ ಹೆಚ್ಚು ಜನರು ಅಕ್ರಮವಾಗಿ ಮನೆಯನ್ನು ಕಟ್ಟುತ್ತಿರುವ ವಿಚಾರವು ಸರ್ಕಾರವು ಗಮನಕ್ಕೆ ಬಂದಿದೆಯೇ?

2. ಹಾಗಿದ್ದಲ್ಲಿ ಈ ಅತಿಕ್ರಮಣಗಾರರನ್ನು ತೆರವು ಮಾಡಿಸಲು ಏನು ಕ್ರಮ ಕೈಗೊಳ್ಳಲಾಗಿದೆ?

3. ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಅತಿಕ್ರಮಣಗಾರರಿಗೆ ತಾತ್ಕಾಲಿಕ ಖಾತೆ ಮಾಡಿಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಇದರ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಸಿ.ಆರ್.ಸಗೀರ್ ಅಹ್ಮದ್ (ವಸತಿ ಸಚಿವರು):

1. ಹೌದು.

2. ಹಾಸನದ ಜಿಲ್ಲಾಧಿಕಾರಿಗಳು ನೀಡಿದ ನಿರ್ದೇಶನದಂತೆ ಹಾಸನ ತಹಶೀಲ್ದಾರರು ಪರಿಶೀಲಿಸಿ ತಮ್ಮ ವರದಿಯಲ್ಲಿ ಕರ್ನಾಟಕ ಗೃಹಮಂಡಳಿಗೆ ಸೇರಿದ ಬೀರನಹಳ್ಳಿ ಸರ್ವೆ ನಂಬರ್ 18 ರಲ್ಲಿ 1.06 ಎಕರೆಗಳು ಮತ್ತು ಸತ್ಯಮಂಗಲ ಹಳ್ಳಿಯ ಸರ್ವೆ ನಂಬರ್ 59 ರಲ್ಲಿನ 20 ಗುಂಟೆ ಭೂಮಿಯನ್ನು ಅನಧಿಕೃತ ಆಕ್ರಮಣಮಾಡಲಾಗಿದೆ ಎಂದು ತಿಳಿಸಿರುತ್ತಾರೆ. ಅನಧಿಕೃತ ಆಕ್ರಮಣಗಾರರನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲು ಹಾಸನ ಜಿಲ್ಲಾಧಿಕಾರಿಗಳನ್ನು ಕೋರಲಾಗಿದೆ.

ಈ ಬಗ್ಗೆ ರಾಜ್ಯ ಉಚ್ಚನ್ಯಾಯಾಲಯದಲ್ಲಿ ಅತಿ ಕ್ರಮಣಕಾರರು ರಿಟ್ ಅರ್ಜಿ ಸಂಖ್ಯೆ 7591-7599/2002 ರನ್ನು ಸಲ್ಲಿಸಿದ್ದು, ಸದರಿ ಅರ್ಜಿಯ ನ್ಯಾಯಾಲಯದಲ್ಲಿ ಬಾಕಿ ಇರುವುದರಿಂದ ಯಾವುದೇ ಕ್ರಮ ಕೈಗೊಳ್ಳಲು ಸಾಧ್ಯವಿರುವುದಿಲ್ಲ.

ಸಿಂಧನೂರು ತಾಲ್ಲೂಕಿನಲ್ಲಿ ಪ್ರೌಢ ಶಾಲೆಗಳನ್ನು ಮಂಜೂರು ಮಾಡುವುದು

478 (755) ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರು): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಪ್ರಸಕ್ತ ಸಾಲಿನಲ್ಲಿ ಸರ್ಕಾರಿ ಪ್ರೌಢ ಶಾಲೆಗಳನ್ನು ಮಂಜೂರು ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ; ಹಾಗಿದ್ದಲ್ಲಿ ಸಿಂಧನೂರು ಕ್ಷೇತ್ರದ ರಾಗಲಪರ್ವಿ, ದಿದ್ದಿಗಿ ಗ್ರಾಮ, ಬೂದಿಹಾಳ ಕ್ಯಾಂಪ್‌ಗಳಿಗೆ ಸರ್ಕಾರಿ ಪ್ರೌಢ ಶಾಲೆ ಮಂಜೂರು ಮಾಡಲು ಇಲಾಖೆಯಿಂದ ಪ್ರಸ್ತಾವನೆ ಬಂದಿದೆಯೇ;